**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು ,  ತಾಃ 30 /10/2025 )**

**ಪಾಟೀ ಸವಾಲು : ವಾದಿ  ಪರ ಶ್ರೀ ಪಿ ಎಸ್ ಆರ್    ವಕೀಲರಿಂದ,**

ನಾನು 7 ನೇ ತರಗತಿ ಓದಿರುತ್ತೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಕೊಲಣಾರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ವಾದಿ  ನನಗೆ  ಮೊದಲಿನಿಂದ ಪರಿಚಯ ಇದೆ. ಪ್ರತಿವಾದಿಯರು ನಗೆ 10 ವರ್ಷಗಳಿಂದ ಪರಿಚಯ ಇದೆ. ನನಗೆ ಸಾಕ್ಷಿ ಹೇಳಲು ಒಂದುವರೆ ವರ್ಷದ ಹಿಂದೆ 1 ನೇ ಪ್ರತಿವಾದಿಯವರು ಕರೆದಿರುತ್ತಾರೆ. 1 ನೇ ಪ್ರತಿವಾದಿಯ ನನ್ನ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿರುತ್ತಾರೆ. ನನಗೆ ಸಾಕ್ಷಿಗೆ ಬರಲು ಹೇಳಿದಾಗ 1 ನೇ ಪ್ರತಿವಾದಿ ನನಗೆ  ಯಾವುದೇ ದಾಖಲೆಯನ್ನು ತೋರಿಸಿರುವುದಿಲ್ಲ.  ವಾದಿ ಹಾಗೂ ಪ್ರತಿವಾದಿಯರ ನಡುವೆ ಕರಾರು ಪತ್ರ ಆಗುವ ಕಾಲಕ್ಕೆ ನಾನು ಇರಲಿಲ್ಲ. ಕರಾರುಪತ್ರವನ್ನು ನಾನು ನೋಡಿದ್ದು ಅದನ್ನು ನನಗೆ 1 ನೇ ಪ್ರತಿವಾದಿಯ ಒಂದುವರೆ ವರ್ಷದ ಹಿಂದೆ  ತೋರಿಸಿರುತ್ತಾರೆ. ಕರಾರಿನಲ್ಲಿ ಯಾರು ಯಾರು ಸಹಿ



ಮಾಡಿದ್ದಾರೆಂದು ನನಗೆ 1 ನೇ ಪ್ರತಿವಾದಿ ತೋರಿಸಿರುತ್ತಾರೆ.  ಪ್ರತಿವಾದಿಯವರು  ವಾದಿಗೆ ಹಣ ನೀಡಿದ ಬಗ್ಗೆ ಕರಾರುಪತ್ರ ನೋಡಿದಾಗ ನನಗೆ ಗೊತ್ತಾಗಿದೆ. ನನ್ನ ಸಮಕ್ಷಮ ಪ್ರತಿವಾದಿ ವಾದಿಗೆ ಹಣ ನೀಡಿದ್ದು ಇಲ್ಲಾ. ಕರಾರುಪತ್ರಕ್ಕೆ ಯಾರು ಸಾಕ್ಷಿದಾರರಾಗಿದ್ದಾರೆ, ಕರಾರು ಪತ್ರ ಎಲ್ಲಿ ತಯಾರಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿಯರ ನಡುವೆ ಖರೀದಿ ಮಾತುಕತೆ ಆಗುವಾಗ ನಾನು ಇರಲಿಲ್ಲ. ಪ್ರತಿವಾದಿಯವರು ವಾಸವಾಗಿದ್ದ ಮನೆಯಿಂದ ನನ್ನ ಮನೆ 200 ಮೀಟರ್ ದೂರದಲ್ಲಿ ಇದೆ. ಪ್ರತಿವಾದಿಯವರು ಯಾವಾಗ ಮನೆ ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲ, ಆದರೆ ಸದರಿ ಮನೆಯನ್ನು ವಾದಿಯವರು ಕಟ್ಟಿರುತ್ತಾರೆ.  ಪ್ರತಿವಾದಿಯರು ವಾಸವಾಗಿದ್ದ ಮನೆಯ ಜಾಗ ಮೂಲತಃ ವಾದಿಗೆ ಸೇರಿದ್ದು ಆಗಿದೆ. ಈಗಲೂ ಸಹ ಪ್ರತಿವಾದಿಯರು ವಾಸವಾಗಿದ್ದ ಜಾಗ ವಾದಿಗೆ ಸೇರಿದ್ದಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯ ಮನೆಯಲ್ಲಿ ವಾದಿಯ ಅನುಮತಿ ಮೇರೆಗೆ ವಾಸವಾಗಿದ್ದಾರೆ  ಎಂದರೆ ಇರಬಹುದು ಎಂದು ಸಾಕ್ಷಿ  ಉತ್ತರಿಸಿರುತ್ತಾರೆ. ಪ್ರತಿವಾದಿಯರಿಗೆ ಲಾಭ ಆಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ವಿಚಾರ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯ ಮಾಹಿತಿ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ.ಕೇ. ಸರಿ ಇದೆ

ಸಹಿ ಇದೆ

ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.